ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/33 /ಸಿಡಿಸಿ(2) 2024 (1417303)
ಅನುಬಂಧ-01, 02 & 03

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:05-03-2025

: ಸುತ್ತೋಲೆ :

ವಿಷಯ: ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರನ್ನು ಪೂರ್ಣಕಾಲಿಕ ನೆಲೆಯಲ್ಲಿ ಎಂ.ಇ / ಎಂ.ಟೆಕ್ ಉನ್ನತ ವ್ಯಾಸಂಗಕ್ಕೆ ನಿಯೋಜಿಸುವ ಬಗ್ಗೆ ಮಾರ್ಗಸೂಚಿಗಳು

****

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ I ರ ಉಪನಿಯಮ (2) ರಲ್ಲಿ ಸರ್ಕಾರಿ ನೌಕರರನ್ನು ನಿಯೋಜಿಸಬಹುದಾದಂತಹ ಉನ್ನತ ಶಿಕ್ಷಣ ಅಥವಾ ವಿಶೇಷ ತರಬೇತಿಯು ಸರ್ಕಾರಿ ಹಿತಾಸಕ್ತಿಗೆ, ನಿರ್ದಿಷ್ಟ ಪ್ರಯೋಜನವುಳ್ಳದ್ದಾಗಿರಬೇಕು. ಉನ್ನತ ವಿಧ್ಯಾಭ್ಯಾಸ ಅಥವಾ ವಿಶೇಷ ತರಬೇತಿಯ ಈ ವ್ಯಾಸಂಗಗಳನ್ನು ಒಂದು ನಿರ್ಧಿಷ್ಟ ಅಥವಾ ಸಾಮಾನ್ಯ ಆದೇಶದ ಮೂಲಕ ಕಾಲಕಾಲಕ್ಕೆ ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ನಿಗಧಿಪಡಿಸತಕ್ಕದ್ದು ಎಂದು ತಿಳಿಸಿದೆ.

ಮತ್ತು

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ I ರ ಉಪನಿಯಮ (3) ರಲ್ಲಿ ಸಂಬಂಧಪಟ್ಟ ಸರ್ಕಾರದ ಇಲಾಖೆಗಳು ತಮ್ಮ ಇಲಾಖೆಯ ವಿಶೇಷ ಕಾರ್ಯಕ್ಷೇತ್ರಗಳಲ್ಲಿ ತರಬೇತಿ ಹೊಂದಿದ ವ್ಯಕ್ತಿಗಳ ಅಗತ್ಯತೆಯ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ತಿಳಿಸಿದೆ.

ಸದರಿ ಕೆಸಿಎಸ್ ನಿಯಮಗಳನ್ವಯ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಉಪನ್ಯಾಸಕರ ಶೈಕ್ಷಣಿಕ ಮತ್ತು ಸಂಶೋಧನಾ ಸಾಮರ್ಥ್ಯಗಳನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ: ಇಡಿ 116 ಟಿಪಿಇ 2022 ದಿನಾಂಕ:28-10-2022 ರಂತೆ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಇ / ಎಂ.ಟೆಕ್ ಉನ್ನತ ವ್ಯಾಸಂಗಕ್ಕೆ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಉಪನ್ಯಾಸಕರನ್ನು ಈ ಕೆಳಕಂಡ ಮಾರ್ಗಸೂಚಿಗಳನ್ವಯ ನಿಯೋಜಿಸಲಾಗುವುದು.

1. ಉಪನ್ಯಾಸಕರ ವಯಸ್ಸು 48 ವರ್ಷಕ್ಕಿಂತ ಕಡಿಮೆ ಅಥವಾ 48 ವರ್ಷ ಇರತಕ್ಕದ್ದು.
2. ಉಪನ್ಯಾಸಕರು ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರತಕ್ಕದ್ದು.
3. ಉಪನ್ಯಾಸಕರು ಕನಿಷ್ಠ 5 ವರ್ಷಗಳ ಸಕ್ರಮ ಸೇವೆಯನ್ನು ಪೂರೈಸಿರತಕ್ಕದ್ದು.

4. ಉಪನ್ಯಾಸಕರು ಆಯ್ಕೆ ಮಾಡಿಕೊಳ್ಳುವ ಎಂ.ಇ / ಎಂ.ಟೆಕ್ ಪದವಿಯ ವಿಷಯವು ಅವರು ನೇಮಕಗೊಂಡಿರುವ ವಿಭಾಗಕ್ಕೆ ಸಂಬಂಧಪಟ್ಟಿರತಕ್ಕದ್ದು ಮತ್ತು ಎಐಸಿಟಿಇಯಿಂದ ಮಾನ್ಯತೆ ಪಡೆದಿರತಕ್ಕದ್ದು.

5. ಉನ್ನತ ವ್ಯಾಸಂಗಕ್ಕೆ ನಿಯೋಜನೆ ಬಯಸುವ ಉಪನ್ಯಾಸಕರು, ಉನ್ನತ ವ್ಯಾಸಂಗದ ನಿಯೋಜನೆಯ ಪ್ರಸ್ತಾವನೆಯನ್ನು ಅನುಬಂಧ-2ರ ಕೋಷ್ಟಕದ ಕ್ರಮ ಸಂಖ್ಯೆ 1 ರಲ್ಲಿ ನಿಗದಿಪಡಿಸಿರುವ ದಿನಾಂಕದ ಒಳಗಾಗಿ ಪ್ರಾಚಾರ್ಯರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು .

6. ಉನ್ನತ ವ್ಯಾಸಂಗಕ್ಕೆ ನಿಯೋಜನೆ ಬಯಸುವ ಉಪನ್ಯಾಸಕರು ಸಲ್ಲಿಸಿದ ಪ್ರಸ್ತಾವನೆಯನ್ನು ಪ್ರಾಚಾರ್ಯರು ಪರಿಶೀಲಿಸಿ ಅಗತ್ಯ ದಾಖಲೆಗಳೊಂದಿಗೆ ಅನುಬಂಧ-2ರ ಕೋಷ್ಟಕದ ಕ್ರಮ ಸಂಖ್ಯೆ 2 ರಲ್ಲಿ ನಿಗದಿಪಡಿಸಿರುವ ದಿನಾಂಕದ ಒಳಗಾಗಿ ತಾಂತ್ರಿಕ ಶಿಕ್ಷಣ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

7. ಉನ್ನತ ವ್ಯಾಸಂಗಕ್ಕೆ ನಿಯೋಜನೆ ಬಯಸುವ ಉಪನ್ಯಾಸಕರ ಮೇಲೆ ಯಾವುದೇ ಇಲಾಖಾ ವಿಚಾರಣೆ, ನ್ಯಾಯಾಂಗ ವಿಚಾರಣೆ, ಕ್ರಿಮಿನಲ್ ವಿಚಾರಣೆಗಳು ಬಾಕಿ ಇದ್ದಲ್ಲಿ, ಅವರ ಪ್ರಸ್ತಾವನೆಯನ್ನು ಪ್ರಾಚಾರ್ಯರು ಇಲಾಖೆಗೆ ಸಲ್ಲಿಸತಕ್ಕದ್ದಲ್ಲ.

8. ಸಿಎಸ್ ನಿಯಮ 61(3)ರ ಅಪೆಂಡಿಕ್ಸ್-II 'ಎ'ಯ ನಿಯಮ I ರ ಉಪನಿಯಮ (4) ರಲ್ಲಿ, ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಸರ್ಕಾರಿ ನೌಕರರ ಸಂಖ್ಯೆಯನ್ನು ಸಂಬಂಧಿತ ಉದ್ಯೋಗಿಯ ಕೇಡರಿನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5% ನ್ನು ಮೀರದಂತೆ, ಕನಿಷ್ಠದಲ್ಲಿ ಇಟ್ಟುಕೊಂಡಿರಬೇಕು ಎಂದು ತಿಳಿಸಿರುವುದರಿಂದ, ಇಲಾಖಾ ಸಂಯುಕ್ತ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಉದ್ಯೋಗಿಯ ಕೇಡರಿನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5% ನ್ನು ಮೀರದಂತೆ ಉನ್ನತ ವ್ಯಾಸಂಗಕ್ಕೆ ಅರ್ಹರಿರುವ ಉಪನ್ಯಾಸಕರ ತಾತ್ಕಾಲಿಕ ಪಟ್ಟಿಯನ್ನು ಅನುಬಂಧ-2ರ ಕೋಷ್ಟಕದ ಕ್ರಮ ಸಂಖ್ಯೆ 3 ರಲ್ಲಿ ನಿಗದಿಪಡಿಸಿರುವ ದಿನಾಂಕದ ಒಳಗಾಗಿ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

9. ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಅರ್ಹರಿರುವ ಉಪನ್ಯಾಸಕರ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ, ಸಂಬಂದಪಟ್ಟ ಉಪನ್ಯಾಸಕರು ಅಗತ್ಯ ದಾಖಲೆಗಳೊಂದಿಗೆ ಅನುಬಂಧ-2ರ ಕೋಷ್ಟಕದ ಕ್ರಮ ಸಂಖ್ಯೆ 4 ರಲ್ಲಿ ನಿಗದಿಪಡಿಸಿರುವ ದಿನಾಂಕದ ಒಳಗಾಗಿ ಆಕ್ಷೇಪಣೆಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಗೆ ಸಲ್ಲಿಸತಕ್ಕದ್ದು.

10. ಕೆಸಿಎಸ್ ನಿಯಮ 61(3)ರ ಅಪೆಂಡಿಕ್ಸ್-II 'ಎ'ಯ ನಿಯಮ I ರ ಉಪನಿಯಮ (4) ರಲ್ಲಿ, ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಸರ್ಕಾರಿ ನೌಕರರ ಸಂಖ್ಯೆಯನ್ನು ಸಂಬಂಧಿತ ಉದ್ಯೋಗಿಯ ಕೇಡರಿನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5% ನ್ನು ಮೀರದಂತೆ, ಕನಿಷ್ಠದಲ್ಲಿ ಇಟ್ಟುಕೊಂಡಿರಬೇಕು ಎಂದು ತಿಳಿಸಿರುವುದರಿಂದ, ಇಲಾಖಾ ಸಂಯುಕ್ತ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಉದ್ಯೋಗಿಯ ಕೇಡರಿನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5% ನ್ನು ಮೀರದಂತೆ ಅರ್ಹರಿರುವ ಉಪನ್ಯಾಸಕರ ಅಂತಿಮ ಪಟ್ಟಿಯನ್ನು ಅನುಬಂಧ-2ರ ಕೋಷ್ಟಕದ ಕ್ರಮ ಸಂಖ್ಯೆ 5 ರಲ್ಲಿ ನಿಗದಿಪಡಿಸಿರುವ ದಿನಾಂಕದ ಒಳಗಾಗಿ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

11. ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಉಪನ್ಯಾಸಕರ ಪಟ್ಟಿಯನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಿದ ನಂತರ, ಅರ್ಹವಾಗಿರುವ ಉಪನ್ಯಾಸಕರುಗಳು ಮಾತ್ರ ಪ್ರಾಚಾರ್ಯರ ಅನುಮತಿ ಪಡೆದು ವಿಶ್ವವಿದ್ಯಾಲಯ/ ಎನ್ಐಟಿ / ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇತ್ಯಾದಿ ಸಂಸ್ಥೆಯವರು ನಡೆಸುವ ಪ್ರವೇಶ ಪರೀಕ್ಷೆಗೆ ಹಾಜರಾಗತಕ್ಕದ್ದು.

12. ಉಪನ್ಯಾಸಕರು ವಿಶ್ವವಿದ್ಯಾಲಯ/ ಎನ್ಐಟಿ / ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇತ್ಯಾದಿ

ಸಂಸ್ಥೆಯವರಿಂದ ಪಡೆದ ಸೀಟು ಹಂಚಿಕೆಯ ಪ್ರತಿಯನ್ನು ಪ್ರಾಚಾರ್ಯರ ಮೂಲಕ ಅನುಬಂಧ-2ರ ಕೋಷ್ಟಕದ ಕ್ರಮ ಸಂಖ್ಯೆ 6 ರಲ್ಲಿ ನಿಗದಿಪಡಿಸಿರುವ ದಿನಾಂಕದ ಒಳಗಾಗಿ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು .

13. ಉಪನ್ಯಾಸಕರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಸರ್ಕಾರ ಸಕ್ಷಮ ಪ್ರಾಧಿಕಾರವಾಗಿದ್ದು, ಸರ್ಕಾರದ ಅನುಮತಿ ಪಡೆದ ನಂತರದಲ್ಲಿ ಉಪನ್ಯಾಸಕರು ಉನ್ನತ ವ್ಯಾಸಂಗದ ಪ್ರವೇಶ ಶುಲ್ಕವನ್ನು ಪಾವತಿಸತಕ್ಕದ್ದು.
14. ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡ ಉಪನ್ಯಾಸಕರು ನಿಯಮ 61(3)ರ ಅಪೆಂಡಿಕ್ಸ್-II 'ಎ'ಯ ನಿಯಮ I ರ ಉಪನಿಯಮ (9) ರನ್ವಯ ಉನ್ನತ ವ್ಯಾಸಂಗ ಅಥವಾ ತರಬೇತಿಯ ನಿಯೋಜನೆಗಾಗಿ ಆಯ್ಕೆಯಾದ ಸರ್ಕಾರಿ ನೌಕರನು ಕರ್ತವ್ಯಗಳಿಂದ ಬಿಡುಗಡೆಹೊಂದುವ ಮೊದಲು ಅನುಬಂಧ-3ರಲ್ಲಿ ಲಗತ್ತಿಸಿರುವ ನಮೂನೆ ಸಂಖ್ಯೆ:19ರಲ್ಲಿ ಬಂಧಪತ್ರ (Agreement) ಅನ್ನು ನೂರು ರೂಪಾಯಿಗಳ ಚಾಪ ಕಾಗದದಲ್ಲಿ ಸಹಿ ಮಾಡಿ ಪ್ರಾಚಾರ್ಯರಿಗೆ ಸಲ್ಲಿಸತಕ್ಕದ್ದು.
15. ನಿಯೋಜನೆಗೊಂಡ ಉಪನ್ಯಾಸಕರು ಉನ್ನತ ವ್ಯಾಸಂಗದ ಪ್ರತಿ ಸೆಮಿಸ್ಟರ್‌ನ ಪರೀಕ್ಷಾ ಫಲಿತಾಂಶ ಹಾಗು ಶೈಕ್ಷಣಿಕ ಪ್ರಗತಿಯ ವರದಿಯನ್ನು ಪ್ರಾಚಾರ್ಯರಿಂದ ದೃಢೀಕರಿಸಿ ಕಡ್ಡಾಯವಾಗಿ ಇಲಾಖೆಗೆ ಸಲ್ಲಿಸತಕ್ಕದ್ದು
16. ಕೆಸಿಎಸ್ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ II ರ ಉಪನಿಯಮ (10) ರನ್ವಯ ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡ ಉಪನ್ಯಾಸಕರು ಉನ್ನತ ವ್ಯಾಸಂಗದಲ್ಲಿ ಸಾಕಷ್ಟು ಪ್ರಗತಿಯನ್ನು ತೋರಿಸಿಲ್ಲದ ಬಗ್ಗೆ ಅಥವಾ ಸೂಕ್ತ ಕಾಲದೊಳಗೆ ವ್ಯಾಸಂಗವನ್ನು ಪೂರ್ಣಗೊಳಿಸಿಲ್ಲವೆಂದು ಸರ್ಕಾರದ ತೀರ್ಮಾನಕ್ಕೆ ಬಂದರೆ, ನಿಯೋಜನಾ ಅವಧಿಯನ್ನು ಅಲ್ಲಿಗೆ ಮುಕ್ತಾಯಗೊಳಿಸಿ ನಿಯೋಜನಾ ಅವಧಿಯಲ್ಲಿ ಸಂದಾಯ ಮಾಡಿದ ವೇತನ ಮತ್ತು ಸ್ಟೈಫಂಡ್ ಸೇರಿದಂತೆ ಅವರ ನಿಯೋಜನೆಗಾಗಿ ಖರ್ಚು ಮಾಡಿದ ಸಂಪೂರ್ಣ ವೆಚ್ಚವನ್ನು ವಸೂಲು ಮಾಡಲಾಗುವುದು
17. ನಿಯೋಜನೆಗೊಂಡ ಉಪನ್ಯಾಸಕರು ಉನ್ನತ ವ್ಯಾಸಂಗದ ಸಂಪೂರ್ಣ ವೆಚ್ಚವನ್ನು ಸ್ವಯಂ ಭರಿಸತಕ್ಕದ್ದು ಮತ್ತು ವೇತನವನ್ನು ಹೊರತುಪಡಿಸಿ ಇನ್ನಾವುದೇ ಆರ್ಥಿಕ ನೆರವನ್ನು ಇಲಾಖೆಯಿಂದ ಪಡೆಯತಕ್ಕದ್ದಲ್ಲ.
18. ಕೆಸಿಎಸ್ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ II ರ ಉಪನಿಯಮ (3) (ಬಿ) ರಡಿ ಎಂ.ಇ / ಎಂ.ಟೆಕ್ ವ್ಯಾಸಂಗದ ಗರಿಷ್ಟ ಅವಧಿಯನ್ನು ಎರಡು ವರ್ಷಗಳಿಗೆ ಸೀಮಿತಗೊಳಿಸಿರುವುದರಿಂದ, ಎಂ.ಇ/ಎಂಟೆಕ್ ಪದವಿಯನ್ನು ಎರಡು ವರ್ಷದ ಅವಧಿಯೊಳಗೆ ಪೂರ್ಣಗೊಳಿಸಿ ಮಾತೃ ಸಂಸ್ಥೆಯಲ್ಲಿ ಕಾರ್ಯವರದಿ ಮಾಡಿಕೊಂಡು ವರದಿಯನ್ನು ಪ್ರಾಚಾರ್ಯರ ಮೂಲಕ ಇಲಾಖೆಗೆ ಸಲ್ಲಿಸತಕ್ಕದ್ದು.
21. ನಿಯೋಜನೆಗೊಂಡ ಉಪನ್ಯಾಸಕರು ಉನ್ನತ ವ್ಯಾಸಂಗವನ್ನು ನಿಯೋಜಿತ ಎರಡು ವರ್ಷದ ಅವಧಿಗೂ ಮೊದಲು ಪೂರ್ಣಗೊಳಿಸಿದ್ದಲ್ಲಿ, ತಕ್ಷಣ ಮಾತೃ ಸಂಸ್ಥೆಗೆ ಕಡ್ಡಾಯವಾಗಿ ಕಾರ್ಯವರದಿ ಮಾಡಿಕೊಂಡು ವರದಿಯನ್ನು ಪ್ರಾಚಾರ್ಯರ ಮೂಲಕ ಇಲಾಖೆಗೆ ಸಲ್ಲಿಸತಕ್ಕದ್ದು.
22. ನಿಯೋಜನೆಗೊಂಡ ಉಪನ್ಯಾಸಕರು ವರ್ಗಾವಣೆಯಾದಲ್ಲಿ, ವರ್ಗಾವಣೆ ಹೊಂದಿದ ಸಂಸ್ಥೆಯಿಂದ ಉನ್ನತ ವ್ಯಾಸಂಗವನ್ನು ಮುಂದುವರಿಸತಕ್ಕದ್ದು.
23. ಕೆ.ಸಿ.ಎಸ್.ಆರ್ ನಿಯಮ 61(3) ರ Appendix-II 'ಎ' ಯ ನಿಯಮ I ರ ಉಪನಿಯಮ (7) ರನ್ವಯ ಒಬ್ಬ ಉಪನ್ಯಾಸಕರನ್ನು ಅವರ ಸಂಪೂರ್ಣ ಸೇವಾವಧಿಯಲ್ಲಿ ಒಂದು ಬಾರಿ ಮಾತ್ರ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲಾಗುವುದು

24 ಉನ್ನತ ವ್ಯಾಸಂಗದ ನಿಯೋಜನೆಯನ್ನು ವಿದ್ಯಾರ್ಥಿಗಳ ಹಿತಾಸಕ್ತಿ ಮತ್ತು ಉಪನ್ಯಾಸಕರ ಪ್ರಾಮಾಣಿಕತೆಯ ದೃಷ್ಟಿಯಿಂದ ನೀಡಿದ್ದು, ಉಪನ್ಯಾಸಕರ ಪದೋನ್ನತಿಯ ಜೇಷ್ಠತೆಗೆ ಪರಿಗಣಿಸಲಾಗುವುದಿಲ್ಲ

25 ಕೆಸಿಎಸ್ ನಿಯಮ 61(3)ರ ಅಪೆಂಡಿಕ್ಸ್ II 'ಎ'ಯ ನಿಯಮ I ರ ಉಪನಿಯಮ (4) ಮತ್ತು (5) ರನ್ವಯ ಇಲಾಖಾ ಸಂಯುಕ್ತ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಉಪನ್ಯಾಸಕರ ಸಂಖ್ಯೆಯನ್ನು ಸಂಬಂಧಿತ ಉದ್ಯೋಗಿಯ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆಯ ಶೇಕಡಾ 5%ನ್ನು ಮೀರದಂತೆ ನಿಯೋಜಿಸಲಾಗುವುದು

26 ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಉಪನ್ಯಾಸಕರ ಪಟ್ಟಿಯನ್ನು ಇಲಾಖೆ ಪ್ರಕಟಿಸಿದ ನಂತರ, ಪಟ್ಟಿಯಲ್ಲಿರುವ ಉಪನ್ಯಾಸಕರುಗಳು ಉನ್ನತ ವ್ಯಾಸಂಗಕ್ಕೆ ಪ್ರವೇಶವನ್ನು ಪಡೆಯದಿದ್ದರೆ, ಅವರನ್ನು ಮುಂದಿನ ಎರಡು ಶೈಕ್ಷಣಿಕ ಅವಧಿಗೆ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲಾಗುವುದಿಲ್ಲ.

27. ಕೆಸಿಎಸ್ ನಿಯಮ 61(3)ರ ಅಪೆಂಡಿಕ್ಸ್-II 'ಎ'ಯ ನಿಯಮ I ರ ಉಪನಿಯಮ (4) ರನ್ವಯ ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಉಪನ್ಯಾಸಕರ ಸಂಖ್ಯೆಯನ್ನು ಸಂಬಂಧಿತ ಉದ್ಯೋಗಿಯ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆಯ ಶೇಕಡಾ 5%ನ್ನು ಮೀರದಂತೆ ಮಿತಿಯಲ್ಲಿ ಇಟ್ಟುಕೊಂಡಿರಬೇಕು ಎಂಬ ನಿಯಮವಿರುವುದರಿಂದ, ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಉಪನ್ಯಾಸಕರ ಪಟ್ಟಿಯನ್ನು ಇಲಾಖೆಯು ಪ್ರಕಟಿಸಿದ ನಂತರ, ಪಟ್ಟಿಯಲ್ಲಿರುವ ಉಪನ್ಯಾಸಕರುಗಳು ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯದೇ ಸೀಟುಗಳು ಖಾಲಿ ಉಳಿದರೆ ಅವುಗಳನ್ನು ಮುಂದಿನ ಶೈಕ್ಷಣಿಕ ಅವಧಿಗೆ ಪರಿಗಣಿಸಲಾಗುವುದು.

ಮೇಲಿನ ಎಲ್ಲಾ ಮಾರ್ಗಸೂಚಿಗಳನ್ನು ಪೂರೈಸಿದ ಉಪನ್ಯಾಸಕರನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ I ರ ಉಪನಿಯಮ(1) ರಿಂದ (10) ರ ಕಾರ್ಯವಿಧಾನಗಳನ್ನು ಪೂರೈಸುವ ಮತ್ತು ಸರ್ಕಾರದ ಆದೇಶದ ಷರತ್ತುಗಳಿಗೊಳಪಟ್ಟು ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಅನುಮತಿ ನೀಡಲಾಗುವುದು.

**ಪೂರ್ಣಕಾಲಿಕ ನೆಲೆಯಲ್ಲಿ ಎಂ.ಇ / ಎಂ.ಟೆಕ್ ಉನ್ನತ ವ್ಯಾಸಂಗಕ್ಕೆ** ಉಪನ್ಯಾಸಕರನ್ನು ನಿಯೋಜಿಸಲು ಪ್ರಾಚಾರ್ಯರು ಪ್ರಸ್ತಾವನೆಯೊಂದಿಗೆ **ಸಲ್ಲಿಸಬೇಕಾದ ದಾಖಲೆಗಳನ್ನು** ಅನುಬಂಧ-01 ರಲ್ಲಿ, ಉನ್ನತ ವ್ಯಾಸಂಗದ **ವೇಳಾ ಪಟ್ಟಿಯನ್ನು ಅನುಬಂಧ-02ರಲ್ಲಿ ಮತ್ತು** ನಮೂನೆ-19 ರ ಬಂಧಪತ್ರವನ್ನು (Agreement) **ಅನುಬಂಧ-03 ರಲ್ಲಿ ಲಗತ್ತಿಸಲಾಗಿದೆ.**

ಆಯುಕ್ತರು

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ - ಅಗತ್ಯ ಕ್ರಮಕ್ಕಾಗಿ

ಪ್ರತಿ:

**ಪ್ರತಿ:**

1. ಜಂಟಿ ನಿರ್ದೇಶಕರು, ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ – ಮಾಹಿತಿಗಾಗಿ.
2. ಲೆಕ್ಕಾಧಿಕಾರಿಗಳು, ಟಿಬಿಎಸ್ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ – ಮಾಹಿತಿಗಾಗಿ.
3. ಇ-ಆಡಳಿತ ವಿಭಾಗ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.
4. ಸಂಸ್ಥೆಯ ಪ್ರಾಚಾರ್ಯರ ಮೂಲಕ ಎಲ್ಲಾ ಉಪನ್ಯಾಸಕರುಗಳಿಗೆ – ಮಾಹಿತಿಗಾಗಿ.

ಅನುಬಂಧ-01

**ಪೂರ್ಣಕಾಲಿಕ ನೆಲೆಯಲ್ಲಿ ಎಂ.ಇ / ಎಂ.ಟೆಕ್ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು.**

1. ಉನ್ನತ ವ್ಯಾಸಂಗಕ್ಕೆ ನಿಯೋಜಿಸುವ ಸಂಬಂಧ ಉಪನ್ಯಾಸಕರು ಪ್ರಾಚಾರ್ಯರಿಗೆ ಸಲ್ಲಿಸಿದ ಮನವಿ ಪತ್ರ.
2. ಉಪನ್ಯಾಸಕರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸುವ ಸಂಬಂಧ ಪ್ರಾಚಾರ್ಯರ ಶಿಫಾರಸ್ಸು ಪತ್ರ.
3. ಉಪನ್ಯಾಸಕರ ನೇಮಕಾತಿ ಆದೇಶ ಪ್ರತಿ.
4. ಉಪನ್ಯಾಸಕರು ಖಾಯಂ ಪೂರ್ಣಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವ ಆದೇಶದ ಪ್ರತಿ.
5. ಉಪನ್ಯಾಸಕರ 10 ನೇ ತರಗತಿಯ ಅಂಕಪಟ್ಟಿಯ ಪ್ರತಿ.
6. ಉಪನ್ಯಾಸಕರು ಅಂಗೀಕೃತ ವಿಶ್ವವಿದ್ಯಾಲದಿಂದ ಪಡೆದಿರುವ ಪದವಿ ಪತ್ರದ ಪ್ರತಿ.
7. ಉನ್ನತ ವ್ಯಾಸಂಗಕ್ಕೆ ನಿಯೋಜಿಸುವ ಉಪನ್ಯಾಸಕರ ಮೇಲೆ ಯಾವುದೇ ಇಲಾಖಾ ವಿಚಾರಣೆ, ನ್ಯಾಯಾಂಗ ವಿಚಾರಣೆ, ಕ್ರಿಮಿನಲ್ ವಿಚಾರಣೆಗಳು ಬಾಕಿ ಇಲ್ಲದಿರುವ ಬಗ್ಗೆ ಪ್ರಾಚಾರ್ಯರಿಂದ ದೃಢೀಕರಣ.
8. ಉನ್ನತ ವ್ಯಾಸಂಗಕ್ಕೆ ನಿಯೋಜಿಸಲ್ಪಡುವ ಉಪನ್ಯಾಸಕರು ಈ ಹಿಂದೆ ಅವರ ಸಂಪೂರ್ಣ ಸೇವಾವಧಿಯಲ್ಲಿ ಯಾವುದೇ ಪೂರ್ಣಕಾಲಿಕ ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡಿರುವುದಿಲ್ಲ ಎಂಬ ಬಗ್ಗೆ ಪ್ರಾಚಾರ್ಯರಿಂದ ದೃಢೀಕರಣ.
9. ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಉಪನ್ಯಾಸಕರ ಪಟ್ಟಿಯನ್ನು ಇಲಾಖೆಯು ಪ್ರಕಟಿಸಿದ ನಂತರ, ಪಟ್ಟಿಯಲ್ಲಿರುವ ಉಪನ್ಯಾಸಕರು ಉನ್ನತ ವ್ಯಾಸಂಗಕ್ಕೆ ಪ್ರವೇಶವನ್ನು ಪಡೆಯದಿದ್ದರೆ, ಅವರನ್ನು ಮುಂದಿನ ಎರಡು ಶೈಕ್ಷಣಿಕ ಅವಧಿಗೆ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲಾಗುವುದಿಲ್ಲ ಎಂಬ ನಿಯಮಕ್ಕೆ ಒಪ್ಪಿಗೆ ಸೂಚಿಸಿ ಉಪನ್ಯಾಸಕರು ಬರೆದು ಕೊಟ್ಟಿರುವ ಮುಚ್ಚಳಿಕೆ ಪತ್ರ.
10. ನಿಯೋಜನೆಗೊಂಡ ಉಪನ್ಯಾಸಕರು ತಮ್ಮ ಉನ್ನತ ವ್ಯಾಸಂಗದ ಸಂಪೂರ್ಣ ವ್ಯಚ್ಛವನ್ನು ಸ್ವಯಂ ಭರಿಸುವುದಾಗಿ ಮತ್ತು ವೇತನವನ್ನು ಹೊರತುಪಡಿಸಿ ಇನ್ನಾವುದೇ ಆರ್ಥಿಕ ನೆರವನ್ನು ಇಲಾಖೆಯಿಂದ ಪಡೆಯುವುದಿಲ್ಲ ಎಂದು ಬರೆದು ಕೊಟ್ಟಿರುವ ಮುಚ್ಚಳಿಕೆ ಪತ್ರ
11. ನಿಯೋಜನೆಗೊಂಡ ಉಪನ್ಯಾಸಕರು ವರ್ಗಾವಣೆಯಾದಲ್ಲಿ, ವರ್ಗಾವಣೆಹೊಂದಿದ ಸಂಸ್ಥೆಯಿಂದ ಉನ್ನತ ವ್ಯಾಸಂಗವನ್ನು ಮುಂದುವರಿಸುವ ಬಗ್ಗೆ ಒಪ್ಪಿಗೆ ಸೂಚಿಸಿ ಬರೆದು ಕೊಟ್ಟಿರುವ ಮುಚ್ಚಳಿಕೆ ಪತ್ರ

ಆಯುಕ್ತರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಅನುಬಂಧ-02

**2025-26 ನೇ ಸಾಲಿನಲ್ಲಿ ಎಂ.ಇ / ಎಂ.ಟೆಕ್ ಉನ್ನತ ವ್ಯಾಸಂಗಕ್ಕೆ ಉಪನ್ಯಾಸಕರನ್ನು ನಿಯೋಜಿಸುವ ಸಂಬಂಧದ ವೇಳಾಪಟ್ಟಿ.**

| ಕ್ರ ಸಂ | ವಿವರಗಳು | ದಿನಾಂಕ |
|---|---|---|
| 01 | ಉನ್ನತ ವ್ಯಾಸಂಗದ ಪ್ರಸ್ತಾವನೆಯನ್ನು ಉಪನ್ಯಾಸಕರು ಪ್ರಾಂಶುಪಾಲರಿಗೆ ಸಲ್ಲಿಸಲು ಕೊನೆಯ ದಿನಾಂಕ. | 22-03-2025 |
| 02 | ಉಪನ್ಯಾಸಕರು ಸಲ್ಲಿಸಿದ ಉನ್ನತ ವ್ಯಾಸಂಗದ ಪ್ರಸ್ತಾವನೆಯನ್ನು ಪ್ರಾಚಾರ್ಯರು ಪರಿಶೀಲಿಸಿ ಅಗತ್ಯ ದಾಖಲೆಗಳೊಂದಿಗೆ ಸಂಯುಕ್ತ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತಾ ಸಂಖ್ಯೆಯನ್ನು ನಮೂದಿಸಿ ಇಲಾಖೆಗೆ ಸಲ್ಲಿಸಲು ಕೊನೆಯ ದಿನಾಂಕ. | 29-03-2025 |
| 03 | ಕೆಸಿಎಸ್ ನಿಯಮ 61(3)ರ ಅಪೆಂಡಿಕ್ಸ್-II 'ಎ'ಯ ನಿಯಮ I ರ ಉಪನಿಯಮ (4) ರಲ್ಲಿ ಉನ್ನತ ವ್ಯಾಸಂಗಕ್ಕೆ ನಿಯೋಜಿಸಬಹುದಾದ ಸರ್ಕಾರಿ ನೌಕರರ ಸಂಖ್ಯೆಯನ್ನು ಸಂಬಂಧಿತ ಉದ್ಯೋಗಿಯ ಕೇಡರಿನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5 ನ್ನು ಮೀರದಂತೆ ಕನಿಷ್ಠದಲ್ಲಿ ಇಟ್ಟುಕೊಂಡಿರಬೇಕು ಎಂದು ತಿಳಿಸಿರುವುದರಿಂದ ಇಲಾಖಾ ಸಂಯುಕ್ತ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಉದ್ಯೋಗಿಯ ಕೇಡರ್‌ನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5 ಮೀರದಂತೆ ಉನ್ನತ ವ್ಯಾಸಂಗಕ್ಕೆ ಅರ್ಹರಿರುವ ಉಪನ್ಯಾಸಕರ ತಾತ್ಕಾಲಿಕ ಪಟ್ಟಿಯನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವ ದಿನಾಂಕ. | 11-04-2025 |
| 04 | ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಅರ್ಹರಿರುವ ಉಪನ್ಯಾಸಕರ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಯನ್ನು ಸಲ್ಲಿಸಲು ಕೊನೆಯ ದಿನಾಂಕ | 19-04-2025 |
| 05 | ನಿಯೋಜಿಸಬಹುದಾದ ಸರ್ಕಾರಿ ನೌಕರರ ಸಂಖ್ಯೆಯನ್ನು ಸಂಬಂಧಿತ ಉದ್ಯೋಗಿಯ ಕೇಡರಿನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5 ನ್ನು ಮೀರದಂತೆ ಕನಿಷ್ಠದಲ್ಲಿ ಇಟ್ಟುಕೊಂಡಿರಬೇಕು ಎಂದು ತಿಳಿಸಿರುವುದರಿಂದ ಇಲಾಖಾ ಸಂಯುಕ್ತ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಉದ್ಯೋಗಿಯ ಕೇಡರ್‌ನ ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5 ಮೀರದಂತೆ ಅರ್ಹರಿರುವ ಉಪನ್ಯಾಸಕರ ಅಂತಿಮ ಪಟ್ಟಿಯನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವ ದಿನಾಂಕ. | 24-04-2025 |
| 06 | ಉಪನ್ಯಾಸಕರು ವಿಶ್ವವಿದ್ಯಾಲಯ / ಎನ್‌ಐಟಿ / ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇತ್ಯಾಧಿ ಸಂಸ್ಥೆಯವರು ನೀಡಿರುವ ಸೀಟು ಹಂಚಿಕೆಯ ಪ್ರತಿಯನ್ನು ಪ್ರಾಚಾರ್ಯರ ಮೂಲಕ ಇಲಾಖೆಗೆ ಸಲ್ಲಿಸಲು ಕೊನೆಯ ದಿನಾಂಕ | ಸೀಟು ಹಂಚಿಕೆಯಾದ ದಿನದಿಂದ ಮೂರು ಕರ್ತವ್ಯದ ದಿನಗಳ ಒಳಗೆ |
| 07 | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ I ರ ಉಪನಿಯಮ(1) ರಿಂದ (10) ರ ಕಾರ್ಯವಿಧಾನಗಳನ್ನು ಪೂರೈಸುವ ಮತ್ತು ಸರ್ಕಾರದ ಆದೇಶದ ಷರತ್ತುಗಳಿಗೊಳಪಟ್ಟು ಉನ್ನತ ವ್ಯಾಸಂಗಕ್ಕೆ ಉಪನ್ಯಾಸಕರುಗಳನ್ನು ನಿಯೋಜಿಸುವ ಸಂಬಂಧ ಪ್ರಸ್ತವನೆಯನ್ನು ಸರ್ಕಾರದ ಅನುಮತಿಗಾಗಿ ಸಲ್ಲಿಸುವ ದಿನಾಂಕ. | ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ಸೀಟು ಹಂಚಿಕೆಯ ಪ್ರಕ್ರಿಯೆ ಮುಕ್ತಾಯವಾದ ನಂತರದ 15 ದಿನಗಳು |

Manjula

ಆಯುಕ್ತರು.

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಅನುಬಂಧ-03

## ನಮೂನೆ – 19

**ಉನ್ನತ ವ್ಯಾಸಂಗಕ್ಕಾಗಿ / ವಿಶೇಷ ತರಬೇತಿಗಾಗಿ ಪ್ರತಿನಿಯೋಜನೆಯ ಮೇಲೆ ಹೋಗುವ ಸರ್ಕಾರಿ ನೌಕರನು ಬರೆದುಕೊಡಬೇಕಾದ ಬಂಧಪತ್ರ.**

ಈ ಬಂಧಪತ್ರದ ಮೂಲಕ ಸಮಸ್ತರಿಗೂ ತಿಳಿಸುವುದೇನೆಂದರೆ,

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿನ ಸರ್ಕಾರಿ ಪಾಲಿಟೆಕ್ನಿಕ್............. ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ.............. ಜಿಲ್ಲೆಯ .........ನ ನಿವಾಸಿಯಾದ (ಇನ್ನು ಮುಂದೆ 'ಕರಾರುದಾರ'ರೆಂದು ಕರೆಯಲಾಗುವ)....... ಎಂಬ ನಾವು ಮತ್ತು (ಇಲ್ಲಿ ಇನ್ನು 'ಜಾಮೀನುದಾರ'ರೆಂದು ಕರೆಯಲಾಗುವ)........ವರ ಮಗ/ಮಗಳಾದ ........ಅವರು ಮತ್ತು.......ಅವರ ಮಗಳಾದ ....... ಅವರು ಸರ್ಕಾರಿ ಸಾಲಗಳ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರಿ ದರಗಳಲ್ಲಿ ಬೇಡಿಕೆಯ ದಿನಾಂಕದಿಂದ ಅದರ ಮೇಲಿನ ಬಡ್ಡಿಯ ಸಹಿತ.......ರೂ.ಗಳ......(ರೂ.ಗಳು ಮಾತ್ರ) ಮೊತ್ತವನ್ನು ಕೋರಿದಾಗ (ಇನ್ನೂ ಮುಂದೆ ಸರ್ಕಾರ ವೆಂದು ಕರೆಯಲಾಗುವ ) ಕರ್ನಾಟಕ ರಾಜ್ಯಪಾಲರಿಗೆ ಸಂದಾಯ ಮಾಡಲು ನಾನು ಮತ್ತು ನಮಗೆ ಸಂಬಂದಿಸಿದ ನಮ್ಮ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು ಒಟ್ಟಾಗಿ ಮತ್ತು ಪ್ರತ್ಯೇಕ ಪ್ರತ್ಯೇಕವಾಗಿ ಈ ಮೂಲಕ ಬದ್ಧರಾಗಿದ್ದೇವೆ. ಅಲ್ಲದೆ, ವಕೀಲರು ಮತ್ತು ಕಕ್ಷಿದಾರರು ಎಲ್ಲಾ ವೆಚ್ಚಗಳನ್ನು ಸಂದಾಯ ಮಾಡಲಾಗುವುದು.

ಸರ್ಕಾರದ ಮೂಲಕ ಕರಾರುದಾರರು ಉನ್ನತ ವ್ಯಾಸಂಗ / ವಿಶೇಷ ತರಬೇತಿಗಾಗಿ ಪ್ರತಿ ನಿಯೋಜಿತವಾರುವದರಿಂದ;

ಮತ್ತು ಸರ್ಕಾರದ ಉತ್ತಮ ಸಂರಕ್ಷಣೆಗಾಗಿ ಈ ಷರತ್ತುಗಳೊಂದಿಗೆ ಈ ಬಂಧಪತ್ರವನ್ನು ಬರೆದುಕೊಡಲು ಕರಾರುದಾರನು ಒಪ್ಪಿರುವುದರಿಂದ;

ಮತ್ತು ಮೇಲೆ ಹೇಳಿದ ಜಾಮೀನುದಾರರು ಮೇಲೆ ತಿಳಿಸಿದ ಕರಾರುದಾರ............. ಅವರ ಪರವಾಗಿ ಈ ಬಂಧಪತ್ರವನ್ನು ಬರೆದುಕೊಡಲು ಒಪ್ಪಿರುವುದರಿಂದ;

ಮೇಲೆ ತಿಳಿಸಿದ ಲಿಖಿತ ಕರಾರಿನ ಷರತ್ತುಗಳೇನೆಂದರೆ ಪ್ರತಿನಿಯೋಜನೆಯ ಗಡುವು ಪೂರೈಸಿದ ನಂತರ ಅಥವಾ ಅವಧಿ ಮುಗಿದ ನಂತರ ಅಥವಾ ಕರ್ತವ್ಯಕ್ಕೆ ಅವನು ಹಿಂತಿರುಗಿದ ಮೂರು ವರ್ಷಗಳ ಅವಧಿಯೊಳಗೆ ಯಾವುದೇ ಸಮಯದಲ್ಲಿ ಕರ್ತವ್ಯಕ್ಕೆ ಹಿಂತಿರುಗದ ಸೇವೆಯನ್ನು ಪುನಃ ವಹಿಸಿಕೊಳ್ಳಲು ತಪ್ಪಿದ ಅಥವಾ ಸೇವೆಗೆ ರಾಜೀನಾಮೆ ನೀಡಿದ ಅಥವಾ ಅನ್ಯಥಾ ಸೇವೆಯನ್ನು ಬಿಟ್ಟುಬಿಟ್ಟ ಸಂದರ್ಭದಲ್ಲಿ ಕರಾರುದಾರನು ಮತ್ತು ಅವನ ಜಾಮೀನುದಾರರು ..... ಸರ್ಕಾರದ ಸಾಲದ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರಿ ಬೇಡಿಕೆ ದಿನಾಂಕದಿಂದ ಅದರ ಮೇಲಿನ ಬಡ್ಡಿಯೊಂದಿಗೆ......ರೂ.ಗಳ(...ರೂ.ಗಳು ಮಾತ್ರ) ಸದರಿ ಮೊತ್ತವನ್ನು ಕೋರಿದಾಗ, ಸರ್ಕಾರಕ್ಕೆ ಅಥವಾ ಸರ್ಕಾರದಿಂದ ನಿರ್ದೇಶಿಸಬಹುದಾದ ವ್ಯಕ್ತಿಗಳಿಗೆ ಕೂಡಲೇ ಸಂದಾಯ ಮಾಡತಕ್ಕದ್ದು.

ಪ್ರತಿ ನಿಯೋಜಿತನು ಅಧ್ಯಯನದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲವೆಂದು ಅಥವಾ ಸೂಕ್ತ ಸಮಯದಲ್ಲಿ ವ್ಯಾಸಂಗವನ್ನು ಪೂರೈಸಲು ತಪ್ಪಿದ್ದಾನೆಂದು ಸಕ್ಷಮ

ಅಧಿಕಾರಿಗಳು ತೀರ್ಮಾನಿಸಿದ ಸಂದರ್ಭದಲಿಲ ಕರಾರು ದಾರನ ವೇತನದಿಂದ ಕರಾರುದಾರನ ಉನ್ನತ ವ್ಯಾಸಂಗ / ವಿಶೇಷ ತರಬೇತಿಗಾಗಿ ಮಾಡಿದ ವೆಚ್ಚವನ್ನು (ವೇತನ ಮತ್ತು ಭತ್ಯೆಗಳು, ಶಿಷ್ಯವೇತನ, ತುಟ್ಟಿಭತ್ಯೆ, ಶಿಕ್ಷಣ ಶುಲ್ಕ, ಇತ್ಯಾಧಿಗಳು ಒಳಗೊಂಡಂತೆ) ಸರ್ಕಾರವೂ ವಸೂಲಿ ಮಾಡುವುದು ವಿಧಿ ಸಮ್ಮತವಾಗಿರತಕ್ಕದ್ದು. ವೇತನದಿಂದ ಅದನ್ನು ವಸೂಲಿ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ ಸರ್ಕಾರದಿಂದ ವಹಿಸಲಾದ ವೆಚ್ಚದ ಸಂಪೂರ್ಣ ಮೊಬಲಗನ್ನು ಕರಾರುದಾರ ಮತ್ತು ಜಾಮೀನುದಾರರು ಒಟ್ಟಾಗಿ ಮತ್ತು ಪ್ರತ್ಯೇಕವಾಗಿ ಮರುಸಂದಾಯ ಮಾಡಲು ಬದ್ಧವಾಗಿರತಕ್ಕದ್ದು.

ಮತ್ತು ಮೇಲೆ ಹೇಳಿದ ಕರಾರುದಾರರಾದ...... ಮತ್ತು ಜಾಮೀನುದಾರರಾದ ..... ಮತ್ತು / ಅಥವಾ ........ವರು ಸಂದಾಯವನ್ನು ಮಾಡಿದ ತರುವಾಯ ಮೇಲಿನ ಲಿಖಿತ ಕರಾರು ಶೂನ್ಯವಾಗತಕ್ಕದ್ದು ಮತ್ತು ಜಾರಿಗೆ ಬರತಕ್ಕುದಲ್ಲ. ಅನ್ಯಥಾ ಅದು ಸಂಪೂರ್ಣ ಜಾರಿಯಲ್ಲಿರತಕ್ಕದ್ದು.

ಪರಂತು ಯಾವಾಗಲೂ ಸರ್ಕಾರ ಅಥವಾ ಅದರಿಂದ ಅಧಿಕೃತನಾದ ಯಾವುದೇ ವ್ಯಕ್ತಿಯ (ಜಾಮೀನುದಾರರ ಸಮ್ಮತಿ ಅಥವಾ ತಿಳಿವಳಿಕೆಯೊಂದಿಗೆ) ಅಥವಾ ಈ ಮೇರೆಗಿನ ಕಾಲನೀಡಿಕೆ ಅಥವಾ ಯಾವುದೇ ತ್ಯಜಿಸುವಿಕೆ, ಕೃತ್ಯ ಅಥವಾ ಲೋಪದ ಕಾರಣದಿಂದ ಜಾಮೀನುದಾರರ ದಾಯಿತ್ವವನ್ನು ಬಾಧಿತಗೊಳಿಸತಕ್ಕದ್ದಲ್ಲ ಅಥವಾ ವಿಮುಕ್ತಿಗೊಳಿಸತಕ್ಕದ್ದಲ್ಲ. ಇಲ್ಲವೇ, ಸರ್ಕಾರವು ಈ ಮೇರೆಗೆ ಬಾಕಿಇರುವ ಮೊಬಲಗಿಗಾಗಿ ಜಾಮೀನುದಾರರಾದ........ಮತ್ತು....... ಅಥವಾ ಅವೆಲ್ಲ ಯಾರ ಮೇಲೆ ಆಗಲಿ ದಾವಾ ಹೂಡುವ ಮೊದಲು ಕರಾರುದಾರನ ಮೇಲೆ ದಾವೆ ಹೂಡುವುದು ಅವಶ್ಯಕವಾಗತಕ್ಕದ್ದು.

ಈ ಬಂಧಪತ್ರವು ಎಲ್ಲಾ ರೀತಿಯಿಂದಲೂ ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತದ ಕಾನೂನುಗಳಿಂದ ಪರಿಪಾಲಿತವಾಗಿರತಕ್ಕದ್ದು ಮತ್ತು ಇದರ ಮೇರೆಗಿನ ಹಕ್ಕುಗಳನ್ನು ಮತ್ತು ಇತರ ದಾಯಿತ್ವಗಳನ್ನು ಅವಶ್ಯವಿರುವಲ್ಲಿ ಭಾರತದಲ್ಲಿಯ ಸಮುಚಿತ ನ್ಯಾಯಾಲಯವು ಸಾರ ನಿರ್ಧರಿಸತಕ್ಕದ್ದು.

ಕರ್ನಾಟಕ ಸರ್ಕಾರವು ಈ ಬಂಧಪತ್ರದ ಮೇಲಿನ ಮುದ್ರಾಂಕ ಶುಲ್ಕವನ್ನು ವಹಿಸಲು ಸಮ್ಮತಿಸಿದೆ.

ಎರಡು ಸಾವಿರದ ........ನೆಯ ವರ್ಷದ....... ತಿಂಗಳ..... ದಿನವಾದ ಇಂದು ಸಹಿ ಮಾಡಲಾಗಿದೆ..... ಅವರ ಸಮಕ್ಷಮದಲ್ಲಿ ಮೇಲೆ ತಿಳಿಸಿದ ಕರಾರುದಾರ..... ಅವರು ಸಹಿ ಮಾಡಿದ್ದಾರೆ.

ಸಾಕ್ಷಿಗಳು

(1)

(2)

........ ಅವರ ಸಕ್ಷಮದಲ್ಲಿ ಮೇಲೆ ತಿಳಿಸಿದ ಹೆಸರಿನ ಜಾಮೀನುದಾರರಾದವರು ಸಹಿ ಮಾಡಿ ಒಪ್ಪಿರುತ್ತಾರೆ.

ಸಾಕ್ಷಿಗಳು

(1)

(2)

....... ಅವರ ಸಕ್ಷಮದಲ್ಲಿ ಮೇಲೆ ತಿಳಿಸಿದ ಹೆಸರಿನ ಜಾಮೀನುದಾರರಾದವರು ಸಹಿ ಮಾಡಿ ಒಪ್ಪಿಸಿರುತ್ತಾರೆ.

ಸಾಕ್ಷಿಗಳು

(1)

(2)

ಸ್ವೀಕರಿಸಲಾಗಿದೆ.
ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಪರವಾಗಿ